ದಿನಾಂಕಃ 09.06.2026

ಅಸಲುದಾವೆ 219/2022

ಪಿ.ಡಬ್ಲ್ಯೂ: 2

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು 5 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನಗೆ 1 ಕಾಲು ಎಕರೆ ಜಮೀನು ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ವಾದಿ ಮತ್ತು ಪ್ರತಿವಾದಿ ನನಗೆ ಗೊತ್ತು. ಮುತ್ತುರಾಯನ ನಾಲೆಗೆ ಜಮೀನು ಭೂ ಸ್ವಾಧೀನವಾಗಿರುವುದನ್ನು ನಾನು ನೋಡಿದ್ದೇನೆ. ಯಾವ ಯಾವ ಸರ್ವೆ ನಂ. ಜಮೀನು ಎಷ್ಟು ವಿಸ್ತೀರ್ಣ ಹೋಗಿದೆ ಎಂದರೆ ಸಾಕ್ಷಿ ಸರ್ವೆ ನಂ. ಮರೆತಿದ್ದೇನೆ, ಒಂದು ಕಡೆ 3 ವರೆ ಗುಂಟೆ ಇನ್ನೊಂದು ಕಡೆ 13 ½ 14 ½ ಗುಂಟೆ ಸ್ವಾಧೀನವಾಗಿದೆ ಎಂದು ಉತ್ತರಿಸುತ್ತಾರೆ. ಸದರಿ ಜಮೀನುಗಳು ಭೂ ಸ್ವಾಧೀನವಾದ ಬಾಬ್ತು ಎಷ್ಟು ಪರಿಹಾರ ಬಂದಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿದ್ದೇನೆ ಸುಮಾರು 35,80,000/- ಬಂದಿದೆ ಎಂದು ಉತ್ತರಿಸುತ್ತಾರೆ. ನಾನು ಅವಾರ್ಡ್ ನೋಟೀಸ್ ನೊಡಿರುವುದಿಲ್ಲ ಆದರೆ ಅವರ ಜೊತೆ ಒಡಾಡುತ್ತಿದ್ದೆ. ವಾದಿ ಮಧುಸೂದನ್ ಹಾಗು ಪ್ರತಿವಾದಿ ಮರಿಲಿಂಗಮ್ಮನವರ ವಂಶವೃಕ್ಷವನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ಮರಿಲಿಂಗಮ್ಮನವರ ಗಂಡನ ಹೆಸರು ಮಂಚಯ್ಯ. ಇವರಿಗೆ ಇಬ್ಬರು ಗಂಡು ಮಕ್ಕಳು ನಾಲ್ಕು ಜನ ಹೆಣ್ಣು ಮಕ್ಕಳು. ಅವರ ಗಂಡು ಮಕ್ಕಳು ಹೆಸರು ಕೃಷ್ಣ ಮತ್ತು ಹೊಂಬಾಳಯ್ಯ. ಹೊಂಬಾಳಯ್ಯನವರಿಗೆ ಅಪ್ಪಾಜಿ ಎಂಬ ಇನ್ನೊಂದು ಹೆಸರು ಇತ್ತು. ಮಧುಸೂದನ್ ಅವರ ತಂದೆಯ ತಂದೆ ಯಾರು ಎಂದು ಗೊತ್ತಾ ಎಂದರೆ ಸಾಕ್ಷಿ ಹೊಂಬಾಳಯ್ಯ ಎಂದೇ ಕರೆಯುತ್ತಿದ್ದರು ಎಂದು ಉತ್ತರಿಸುತ್ತಾರೆ. ವಾದಿಯ ತಾತ ಹೊಂಬಾಳಯ್ಯನವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ಇಬ್ಬರು ಮಕ್ಕಳು ಎಂದು ಉತ್ತರಿಸುತ್ತಾರೆ. ಸಾಕ್ಷಿ ಪುನಃ ಹೇಳುತ್ತಾರೆ ಮೂರು ಜನ ಎಂದು. ಅವರ ಹೆಸರು ಹೊಂಬಾಳಯ್ಯ, ಆರಬೆರಳ್ಳಯ್ಯ ಮತ್ತು ಮರಿಯಯ್ಯ. ವಾದಿ ಮಧುಸೂದನ್ ಹೊಂಬಾಳಯ್ಯನವರ ಮಗ. ತಹಶೀಲ್ದಾರ್ ಕಛೇರಿಯಿಂದ ನೀಡಲಾಗಿರುವ ವಾದಿ ಮಧುಸೂದನ್ ಅವರ ವಂಶವೃಕ್ಷವಾಗಲಿ, ಪ್ರತಿವಾದಿ ಮರಿಲಿಂಗಮ್ಮನವರ ಕುಟುಂಬದ ವಂಶವೃಕ್ಷವನ್ನಾಗಲಿ ನೋಡಿದ್ದೀರಾ ಎಂದರೆ ಸಾಕ್ಷಿ ನೊಡಿಲ್ಲ ಎಂದು ಉತ್ತರಿಸುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ಭಾಗ ಆಗಿತ್ತಾ ಎಂದರೆ ಸಾಕ್ಷಿ ಈ ಎರಡು ಸ್ವತ್ತುಗಳನ್ನು ಬಿಟ್ಟು ಭಾಗ ಆಗಿತ್ತು ಎಂದು ಉತ್ತರಿಸುತ್ತಾರೆ. ಸದರಿ ಭಾಗ

ಸುಮಾರು 15-20 ವರ್ಷಗಳ ಹಿಂದೆ ಆಗಿರಬಹುದು. ಭಾಗ ಆಗಿರುವ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ. ಎರಡು ಆಸ್ತಿಗಳನ್ನು ಬಿಟ್ಟು ಭಾಗ ಮಾಡಿಕೊಂಡಿದ್ದಾರೆ ಎಂದು ನೀವು ಹೇಳುವ ಭಾಗದ ಪತ್ರವನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಮಧುಸೂದನ್ ಅವರ ಕುಟುಂಬಕ್ಕು ಪ್ರತಿವಾದಿ ಮರಿಲಿಂಗಮ್ಮನವರ ಕುಟುಂಬದ ನಡುವೆ ಯಾವುದೇ ಸಂಬಂಧವಿಲ್ಲ, ಹೊಂಬಾಳಯ್ಯ ಎಂಬ ಹೆಸರು ಎರಡೂ ಕುಟುಂಬದ ಸದಸ್ಯರ ಹೆಸರುಗಳು ಇರುವುದರಿಂದ ಅದನ್ನು ದುರುಪಯೋಗ ಪಡಿಸಿಕೊಂಡು ವಾದಿ ಹಾಗು ನೀವು ಎಲ್ಲರೂ ಶಾಮೀಲಾಗಿ ಸುಳ್ಳು ಕೇಸ್ ಹಾಕಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

2. ಭೂ ಪರಿಹಾರ ವಿಚಾರವಾಗಿ ಊರಿನಲ್ಲಿ ನ್ಯಾಯಾ ಪಂಚಾಯಿತಿ ಸೇರಿದ್ದರು ಎಂದು ಹೇಳಿದ್ದೀರಿ, ಯಾರು ಯಾರು ಸೇರಿದ್ದೀರಿ ಎಂದರೆ ಸಾಕ್ಷಿ ಒಳಗೆರೆದೊಡ್ಡಿ ಗ್ರಾಮದ ನಾಗೇಶ್ ಎಂಬುವವರ ಮನೆಯವರ ಬಳಿ ನಾನು, ಅಂಕನಾಥಪುರದ ಶಂಕರ, ಒಳಗೆರೆದೊಡ್ಡಿ ಗ್ರಾಮದ ನಾಗೇಶ್ ಸೇರಿದ್ದೆವು ಎಂದು ಉತ್ತರಿಸುತ್ತಾರೆ. ಪಂಚಾಯಿತಿ ಸೇರಿದಾಗ ಬೆಳಗ್ಗೆ ಸುಮಾರು 10 ಗಂಟೆ ಆಗಿರಬಹುದು. ನೀವು ಹೇಳುವ ರೀತಿ ಯಾವುದೇ ಪಂಚಾಯಿತಿ ಸೇರಿಲ್ಲ ವಾದಿ ಮಧುಸೂದನ್ ಅವರಿಗೆ ಸಹಾಯ ಮಾಡಲು ಆ ರೀತಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ, ಇರುವುದನ್ನು ಹೇಳುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ವಾದಿ ಮಧುಸೂದನ್ ಅವರು ಇದೇ ರೀತಿ 3-4 ಕುಟುಂಬದವರಿಗೆ ಭೂ ಪರಿಹಾರದ ಹಣವನ್ನು ಪಡೆದುಕೊಂಡು ಮೋಸ ಮಾಡಿದ್ದಾರೆ ಎಂದರೆ ಸಾಕ್ಷಿ ಇಲ್ಲಚಿ ಭೂ ಪರಿಹಾರದ ಹಣವನ್ನು ಹಂಚಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಮಂಡ್ಯದಲ್ಲಿ ಎಲ್.ಎ.ಸಿ ಕೇಸ್ ನಲ್ಲಿ ನಾನು ಹೋಗಿರುವುದಿಲ್ಲ.

**ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.